**ಓ.ಎಸ್.ನಂಬ್ರ:387/2023 ಡಿ.ಡಬ್ಲ್ಯೂ :1**

ದಿನಾಂಕಃ 19-12-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲುಃ ಶ್ರೀ ಎಮ್.ಎಸ್.ಎಸ್. ವಕೀಲರಿಂದ**

ಒಟ್ಟು 27 ಸೆಂಟ್ಸ ಜಾಗವನ್ನು ಕೆ.ಸಿ.ಎಫ್.ಸಿ.ಗೆ ಮಾರ್ಟ್ಗೇಜ್ ಮಾಡಲಾಗಿದೆ. ಒಟ್ಟು 4 ಬಾರಿ ಒಂದೇ ಆಸ್ತಿಯ ಮೇಲೆ ಸಾಲವನ್ನು ಪಡೆದಿರುತ್ತಾರೆ ಮತ್ತು ವಾದಿ 4 ಬಾರಿ ಚಾರ್ಜನ್ನು ಕ್ರಿಯೇಟ್ ಮಾಡಿರುತ್ತಾರೆ. ಸಾಲ ಪಡೆದುಕೊಂಡ ನಂತರ ಸಾಲದ ಎಲ್ಲಾ ಷರತ್ತುಗಳನ್ನು ವಾದಿ ಉಲ್ಲಂಘಿಸಿರುತ್ತಾರೆ. ನಾನು ವಾದಿಗೆ ಕಾನೂನು ಪ್ರಕಾರ ನೋಟೀಸನ್ನು ನೀಡಿರುತ್ತೇನೆ ಹಾಗು 12 ಬಾರಿ ದಿನಪತ್ರಿಕೆಯಲ್ಲಿ ಪ್ರಕಟಿಸಿರುತ್ತೇನೆ. ವಾದಿ ಮತ್ತು ಜಾಮೀನುದಾರರು ನಮ್ಮ ಫೈನಾನ್ಸಿಗೆ ಬಂದು ಸಾಲವನ್ನು ಮರುಪಾವತಿ ಮಾಡುತ್ತೇವೆಂದು ಹೇಳಿರುವುದಿಲ್ಲ.

2. ಸರಕಾರದ ಸಾಮಿತ್ವಕ್ಕೆ ನಮ್ಮ ಸಂಸ್ಥೆ ಸೇರಿರುವ ಕಾರಣ ಕೃಷಿ ಭೂಮಿಯನ್ನು ಮಾರ್ಟ್ಗೇಜ್ ಮಾಡಲು ಯಾವುದೇ ಕಾನೂನಿನ ಅಡೆತಡೆ ಇರುವುದಿಲ್ಲ. ದಿನಪತ್ರಿಕೆಯಲ್ಲಿ 27 ಎಂದು ಬರೆಯುವ ಬದಲು ಕೈ ತಪ್ಪಿನಿಂದ 12 ಸೆಂಟ್ಸ ಎಂದು ಕಾಣಿಸಲಾಗಿದೆ. 12 ಸೆಂಟ್ಸ ಜಾಗಕ್ಕೆ ಪ್ರತ್ಯೇಕವಾಗಿ ಮಾರ್ಟ್ಗೇಜ್ ಡೀಡ್ ಬರೆದುಕೊಟ್ಟಿರುವುದಿಲ್ಲ. 27 ಸೆಂಟ್ಸಗೆ ಮಾರ್ಟ್ಗೇಜ್ ಡೀಡ್ ಬರೆದುಕೊಟ್ಟಿರುತ್ತಾರೆ. ವಾದಿ ಮತ್ತು ಜಾಮೀನುದಾರರು ಇವತ್ತಿನವರೆಗೂ ಹಣವನ್ನು ಪಾವತಿ ಮಾಡುತ್ತೇವೆಂದು ನಮ್ಮ ಕಚೇರಿಗೆ ಬಂದು ಹೇಳಿರುವುದಿಲ್ಲ. ಕಾನೂನು ಪ್ರಕಾರ Auction ಮಾಡಿ 3 ನೇ ಪ್ರತಿವಾದಿಗೆ 27 ಸೆಂಟ್ಸಗೆ ನೊಂದಾಯಿತ ಕ್ರಯ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಹಾಗು ಅವರು ಸಂಪೂರ್ಣ ಹಣವನ್ನು ಪಾವತಿಸಿರುತ್ತಾರೆ. ಅಕೌಂಟ್ ಬುಕ್ ಪ್ರಕಾರ 24 ಕೋಟಿಗಿಂತಲೂ ಜಾಸ್ತಿ ಹಣ ವಾದಿ ಮತ್ತು ಜಾಮೀನುದಾರರು ಪಾವತಿ ಮಾಡಲು ಬಾಕಿ ಇದೆ. ನಿಡಿ 25 ರ ಪ್ರಕಾರ ಬಡ್ಡಿಯನ್ನು ಲೆಕ್ಕಾಚಾರ ಮಾಡಿರುತ್ತೇವೆ. ಕಾನೂನಿನ ಪ್ರಕಾರ ಸಾರ್ವಜನಿಕ ಹಣವನ್ನು ವಸೂಲಾತಿ ಮಾಡಿರುತ್ತಾರೆ, ಆದ್ದರಿಂದ ದಾವೆ ವಜಾ ಆಗಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಹೆಚ್.ಪಿ.ಹೆಚ್. ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು , ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**